ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-1, ಸಂಚಿಕೆ-4 | ತ್ರೈಮಾಸಿಕ, ಅಕ್ಟೋಬರ್-ಡಿಸೆಂಬರ್ 2014 | ಪುಟಗಳು-12



- ನಿಗಮ ಕಚೇರಿಗೆ ಇಂಧನ ಸಚಿವರ ಭೇಟಿ
- ಜರ್ಮನಿಯಲ್ಲಿ ಸೌರಶಕ್ತಿ
- ಹಬ್ಬ–ರಾಷ್ಟ್ರೀಯ ದಿನಾಚರಣೆ

...ಇನ್ನು ಹಲವು ವಿಷಯಗಳೊಂದಿಗೆ

# ಬೆಸ್ಕಾಂ ನಿಗಮ ಕಚೇರಿಗೆ ಮಾನ್ಯ ಇಂಧನ ಸಚಿವರ ಭೇಟಿ ಮತ್ತು ಪ್ರಗತಿ ಪರಿಶೀಲನೆ


















# ವ್ಯವಸ್ಥಾಪಕ ನಿರ್ದೇಶಕರ ಸಂದೇಶ



**ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಸಹೋದ್ಯೋಗಿಗಳೆ,

ಕಳೆದ ತ್ರೈಮಾಸಿಕದಲ್ಲಿ ಮಳೆಗಾಲವನ್ನು ಎದುರಿಸುವುದೇ ಒಂದು ಸವಾಲಾಗಿತ್ತು. ಮಳೆ-ಗಾಳಿಯಿಂದಾಗಿ ಸಂಭವಿಸುವ ವಿದ್ಯುತ್ ಅವಘಡಗಳನ್ನು ಪರಿಹರಿಸಿ ಸುಗಮ ವಿದ್ಯುತ್ ಸರಬರಾಜು ಮಾಡುವಲ್ಲಿ ತಾವೆಲ್ಲರೂ ಪ್ರಯತ್ನಿಸಿ ಯಶಸ್ವಿಯಾಗಿರುವುದು ಶ್ಲಾಘನಿಯ. ಈ ಕೆಲಸಕ್ಕಾಗಿ ನಾವು ನಿಮ್ಮೆಲ್ಲರ ಬೆನ್ನುತಟ್ಟುವ ಮೂಲಕ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವಾಗಿದೆ. ಮುಂಬರುವ ದಿನಗಳಲ್ಲೂ ತಾವೆಲ್ಲರೂ ಇದೆ ಉತ್ಸಾಹವನ್ನು ಇಟ್ಟುಕೊಂಡು ಕರ್ತವ್ಯ ಪ್ರಜ್ಞೆಯನ್ನು ಮೆರೆಯಬೇಕೆಂಬುದೇ ನಮ್ಮ ಆಶಯವಾಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ, ಯಾವುದೇ ಒಂದು ಸಂಸ್ಥೆಯ ಕಾರ್ಯಾಚರಣೆಯು ಸುಗಮವಾಗಿ ನಡೆಯಬೇಕಾದರೆ, ಆ ಸಂಸ್ಥೆಯ ಆದಾಯ ಪ್ರಮುಖವಾಗಿರುತ್ತದೆ. ಬೆಸ್ಕಾಂನಲ್ಲಿ ವಿದ್ಯುತ್ ಬಳಕೆ ಶುಲ್ಕದ ಬಾಕಿಯನ್ನು ವಸೂಲು ಮಾಡುವಿಕೆಯನ್ನು ಉತ್ತಮಪಡಿಸಲು, ಏಪ್ರಿಲ್ 2014ರಿಂದ ಬಾಕಿ ವಸೂಲಿ ಹಾಗೂ ತತ್ಸಂಬಂಧವಾದ ಹೆಚ್ಚುವರಿ ಭದ್ರತಾ ಠೇವಣಿ ಸಂಗ್ರಹಣೆಯ ಕಾರ್ಯಪ್ರಕ್ರಿಯೆಗೆ ಚಾಲನೆ ನೀಡಲಾಗಿತ್ತು.. ಈ ವಸೂಲಿ ಸಂಗ್ರಹಣೆಯ ಕಾರ್ಯಪ್ರಕ್ರಿಯೆಯು ಯಶಸ್ವಿಗೊಳ್ಳಲು ಕಾರಣರಾದ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರನ್ನು ಅಭಿನಂದಿಸಲು ಇಚ್ಛಿಸುತ್ತೇನೆ. ಇದು ಕೇವಲ ಏಕಕಾಲಿಕ ಕಾರ್ಯಪ್ರಕ್ರಿಯೆಯಾಗಿರದೆ, ಸಂಬಂಧಿತ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ವಿದ್ಯುತ್ ಬಳಕೆ ಶುಲ್ಕ ವಸೂಲಿಯನ್ನು ಆಯಾ ತಿಂಗಳಿನಲ್ಲೇ ಮಾಡಿ ಬೆಸ್ಕಾಂನ ರೆವಿನ್ಯೂ ಸಂಗ್ರಹಣೆಯು ಪ್ರತಿ ಮಾಸಿಕದಲ್ಲೂ ಉತ್ತಮವಾಗಿರುವಂತೆ ಯಶಸ್ವೀ ಪ್ರಯತ್ನವನ್ನು ಕೈಗೊಳ್ಳಬೇಕೆಂದು ಮನವಿ ಮಾಡುತ್ತೇನೆ. ಇದು ನಿರಂತರವಾದ ಯಶಸ್ವೀ ಕಾರ್ಯಪ್ರಕ್ರಿಯೆಯಾಗಿರತಕ್ಕದ್ದು.

ಪ್ರಸಕ್ತ, ಎಚ್.ಟಿ. ಸ್ಥಾಪನಗಳ ವಿದ್ಯುತ್ ಬಳಕೆ ಶುಲ್ಕದ ಬಿಲ್ಲುಗಳನ್ನು ಆಯಾ ತಿಂಗಳ ಮೊದಲ ದಿನದಂದು ಹಾಗೂ ಇತರ ಪ್ರವರ್ಗಗಳ ಸ್ಥಾಪನಗಳ ಬಿಲ್ಲುಗಳನ್ನು 15ನೇ ದಿನಾಂಕಕ್ಕೆ ಮುಂಚಿತವಾಗಿ ಸಿದ್ಧಪಡಿಸಿ ವಿತರಿಸಲಾಘುತ್ತಿದೆ. ಈ ಕಾರ್ಯಪ್ರಕ್ರಿಯೆಯು ಶತಪ್ರತಿಶತದಷ್ಟು ಪೂರ್ಣಗೊಂಡಿರುವುದನ್ನು ನಾವು ಖಚಿತಪಡಿಸಿಕೊಳ್ಳಬೇಕು. ಹೀಗೆ ಯಶಸ್ವಿ ಕಾರ್ಯಪ್ರಕ್ರಿಯೆಯಿಂದ ವಿದ್ಯುತ್ ಬಳಕೆ ಶುಲ್ಕವನ್ನು ನಿಯತ ಅವಧಿಯೊಳಗೆ ವಸೂಲಿ ಮಾಡಿ, ಆದಾಯವನ್ನು ಉತ್ತಮಪಡಿಸುವುದರ ಮೂಲಕ ನಾವು ನಮ್ಮ ಸಂಸ್ಥೆಯ ಕಾರ್ಯಾಚರಣೆಯನ್ನು ಖಚಿತವಾಗಿ ಸುಗಮವಾಗಿ ನಡೆಸಬಹುದೆಂಬುದು ನನ್ನ ನಂಬಿಕೆ.

ತಮ್ಮೆಲ್ಲರಿಗೂ ನಾಡಹಬ್ಬ ದಸರಾದ ಶುಭಾಶಯಗಳು.

# ಸಂಪಾದಕೀಯ...



ಆತ್ಮೀಯರೆ,

ಮುಂಗಾರು ಮಳೆಗಾಲ ಕಳೆದು, ನಾಡಹಬ್ಬ ದಸರಾ ಉತ್ಸವಕ್ಕೆ ಕಾಲಿಡುತ್ತಿದ್ದೇವೆ. ಮಳೆಯ ಕಣ್ಣಾಮುಚ್ಚಾಲೆಯು, ನಾಡಿನ ಜನರಲ್ಲಿ ಸಹಜವಾಗಿ ಆತಂಕದ ವಾತಾವರಣವನ್ನು ಸೃಷ್ಟಿಸಿತ್ತು. ಆರಂಭದ ದಿನಗಳಲ್ಲಿ ನಿರೀಕ್ಷಿತ ಪ್ರಮಾಣದ ಮಳೆಯಾಗದ ಕಾರಣ, ಬರದ ಕರಾಳ ಛಾಯೆಯು ಆವರಿಸಿತ್ತು. ತತ್ಪರಿಣಾಮವಾಗಿ ವಿದ್ಯುತ್ ಕ್ಷಾಮದ ಭೀತಿಯೂ ರಾಜ್ಯವನ್ನು ಕಾಡಿತ್ತು.

ವರುಣ ದೇವರ ಕೃಪೆಯಿಂದಾಗಿ, ರಾಜ್ಯದ ಎಲ್ಲ ಕಡೆ ಮಳೆಯಿಂದಾಗಿ, ಬಹುತೇಕ ಜಲಾಶಯಗಳು ಭರ್ತಿಯಾಗಿವೆ. ಭರ್ತಿಯಾದ ಜಲಾಶಯಗಳು ನೀರಿನ ಸಮೃದ್ಧಿಯ ಸಂಕೇತವಾದರೂ, ಜಲ ವಿದ್ಯುತ್ ಉತ್ಪಾದನೆಯ ಮೂಲಕ ವಿದ್ಯುತ್ ಕೊರತೆ ನಿವಾರಣೆಗೆ ಸಹಾಯವಾಗಲಿದೆ. ಮಳೆ ಬಿದ್ದ ಪ್ರದೇಶಗಳಲ್ಲಿ, ಕೃಷಿ ಚಟುವಟಿಕೆಗಳು ಹಾಗೆಯೇ ನಡೆಯುವುದರಿಂದ, ಕೃಷಿ ಪಂಪುಸೆಟ್ಟುಗಳಿಗೆ ಬಳಸಲ್ಪಡುವ ವಿದ್ಯುತ್ ಪ್ರಮಾಣದಲ್ಲಿ ಉಳಿತಾಯವಾಗಲಿದೆ. ಇದು ವಿದ್ಯುತ್ ಕ್ಷೇತ್ರಕ್ಕೆ ಒಂದು ರೀತಿಯಲ್ಲಿ ವರದಾನ. ಈ ಸಾಲಿನ ಮುಂಗಾರು ಮಳೆಯು ಕೃಷಿ ಹಾಗೂ ವಿದ್ಯುತ್ ಕ್ಷೇತ್ರಕ್ಕೆ ಆಶಾದಾಯಕವಾಗಿದೆ.

ಇಂಧನ ಖಾತೆ ಸಚಿವರಾದ ನಂತರ, ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ರವರು, ಬೆಸ್ಕಾಂ ನಿಗಮ ಕಾರ್ಯಾಲಯಕ್ಕೆ ಮೊದಲ ಸಲ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ನಿರಂತರ ಜ್ಯೋತಿ, ಸೌರಶಕ್ತಿ ಯೋಜನೆಗಳು, ಅಕ್ರಮ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣ, ವಿದ್ಯುತ್ ಕಳ್ಳತನ ತಡೆಗಟ್ಟುವುದು, ಇತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸಿ ಒಟ್ಟಾರೆ ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆ ತರಬೇಕೆಂದು ಮಾನ್ಯ ಸಚಿವರು ಕರೆ ಕೊಟ್ಟಿರುವುದು ನಮಗೆಲ್ಲರಿಗೂ ಮಾರ್ಗದರ್ಶನವಾಗಿದೆ.

ನಮ್ಮ ಕಾರ್ಯಚಟುವಟಿಕೆಗಳು ಮತ್ತಷ್ಟು ಗ್ರಾಹಕ ಸ್ನೇಹಿಯಾಗಬೇಕು ಹಾಗೂ ತ್ವರಿತಗತಿಯಲ್ಲಿ ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚಿನ ಒತ್ತು ನೀಡಬೇಕೆನ್ನುವುದು ಮಾನ್ಯ ಸಚಿವರ ಆಶಯವಾಗಿದೆ.

ಮಾನ್ಯ ಸಚಿವರು ಪ್ರಕಟಿಸಿರುವ ಸೂರ್ಯರೈತ ಯೋಜನೆಯು ಗಮನಾರ್ಹವಾಗಿದೆ. ಅಸಾಂಪ್ರದಾಯಿಕ ಇಂಧನ ಮೂಲವಾದ ಸೌರಶಕ್ತಿಯ ಉತ್ಪಾದನೆ ಮತ್ತು ಅದರ ಹೆಚ್ಚಿನ ಬಳಕೆಗೆ ಮತ್ತಷ್ಟು ಆಸಕ್ತಿವಹಿಸಬೇಕಾದುದು ಇಂದಿನ ತುರ್ತು ಅಗತ್ಯ. ನಮ್ಮಲ್ಲಿ ಬಿಸಿಲಿಗೆ ಬರವಿಲ್ಲ. ಅದನ್ನು ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸಿದರೆ ಜಲವಿದ್ಯುತ್ ಹಾಗೂ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯ ಮೇಲಿನ ಒತ್ತಡ ಕಡಿಮೆಯಾಗುತ್ತದೆ.ಈ ಯೋಜನೆಯು ರೈತವರ್ಗದವರಿಗೆ ಅನುಕೂಲವಾಗುವುದರ ಜೊತೆಗೆ, ವಿದ್ಯುತ್ ಅಪವ್ಯಯ ತಡೆಯಲು ಹಾಗೂ ವಿದ್ಯುತ್ ಕೊರತೆ ನೀಗಿಸಲು ನೆರವಾಗುತ್ತದೆ

ಈ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯೋನ್ಮುಖರಾಗೋಣ. ಈ ತ್ರೈಮಾಸಿಕದ ಅವಧಿಯಲ್ಲಿ ದಸರಾ, ದೀಪಾವಳಿ, ರಾಜ್ಯೋತ್ಸವ, ಬಕ್ರೀದ್ ಹಾಗೂ ಕ್ರಿಸ್‌ಮಸ್ ಹಬ್ಬಗಳು ಬಂದಿರುವುದರಿಂದ ಬೆಸ್ಕಾಂನ ಎಲ್ಲರಿಗೂ ಹಾರ್ದಿಕ ಶುಭಾಶಯಗಳು.

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ

# ಮಾನ್ಯ ಇಂಧನ ಸಚಿವರಿಂದ ಬೆಸ್ಕಾಂ ಪ್ರಗತಿ ಪರಿಶೀಲನೆ




ಆಗಸ್ಟ್ 1 ರಂದು ಇಂಧನ ಸಚಿವರಾದ ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ವಿದ್ಯುತ್ ಸರಬರಾಜು(ಬೆಸ್ಕಾಂ) ಕಚೇರಿಯ ನಿಗಮ ಕಾರ್ಯಾಲಯಕ್ಕೆ ಭೇಟಿ ನೀಡಿದರು. ಇಂಧನ ಸಚಿವರಾಗಿ ಕಾರ್ಯಭಾರ ವಹಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ಬೆಸ್ಕಾಂ ಕಚೇರಿಗೆ ಆಗಮಿಸಿದ್ದ ಸಚಿವರಿಗೆ ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪಂಕಜ್ ಕುಮಾರ್ ಪಾಂಡೆ ಅವರು ಸ್ವಾಗತ ಕೋರಿದರು.

ಗ್ರಾಹಕರಿಗೆ ಉತ್ತಮ ಸೇವೆ ನೀಡುವಲ್ಲಿ ಬೆಸ್ಕಾಂ ಕೈಗೊಂಡಿರುವ ಹಾಗೂ ಕೈಗೊಳ್ಳುತ್ತಿರುವ ವಿವಿಧ ಯೋಜನಾ ಕ್ರಮಗಳ ಕುರಿತಾದ ವರದಿಯನ್ನು ವೀಕ್ಷಿಸಿದ ಸಚಿವರಿಗೆ ಸಹಾಯವಾಣಿ ಕಾರ್ಯನಿರ್ವಹಿಸುವ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. 2010ನೇ ಸಾಲಿನಲ್ಲಿ ಅಂದಾಜು 2,01,808 ದೂರುಗಳನ್ನು ಸ್ವೀಕರಿಸಲಾಗಿದ್ದು, ಸದರಿ ದೂರುಗಳನ್ನು ಸರಾಸರಿ 1:31 ನಿಮಿಷಕ್ಕೊಂದರಂತೆ ಬಗೆಹರಿಸಲಾಗಿದೆ. ಆದರೆ, ಪ್ರಸ್ತುತ 2013ನೇ ಸಾಲಿನಲ್ಲಿ 7.80 ಲಕ್ಷ ದೂರುಗಳು ಸಹಾಯವಾಣಿಯಲ್ಲಿ ದಾಖಲಾಗಿದ್ದು ಪ್ರತಿ ದೂರನ್ನು 33 ನಿಮಿಷಕ್ಕೊಂದರಂತೆ ಪರಿಹರಿಸಲಾಗಿರುತ್ತದೆ. 2014ನೇ ವರ್ಷದ ಅಗಸ್ಟ್ ತಿಂಗಳ ಅಂತ್ಯದವರೆಗೆ 7 ಲಕ್ಷಕ್ಕೂ ಮೇಲ್ಪಟ್ಟು ದೂರುಗಳು ಬಂದಿದ್ದು, ಪ್ರತಿ ದೂರನ್ನು 35 ನಿಮಿಷಕ್ಕೊಂದರಂತೆ ಬಗೆಹರಿಸಲಾಗಿರುತ್ತದೆ.

ಗ್ರಾಹಕರು ತಮ್ಮ ಮಾಸಿಕ ಬಿಲ್‌ಗಳನ್ನು ಪಾವತಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಆನ್‌ಲೈನ್ ಸೌಲಭ್ಯವನ್ನೂ ಕಲ್ಪಿಸಲಾಗಿರುತ್ತದೆ ಎಂದು ಸಚಿವರಿಗೆ ತಿಳಿಸಲಾಯಿತು. ಪ್ರಸ್ತುತ ಬೆಸ್ಕಾಂನ ಲಕ್ಷಾಂತರ ಗ್ರಾಹಕರು ಆನ್‌ಲೈನ್ ಮೂಲಕ ವಿದ್ಯುತ್ ಬಿಲ್ಲುಗಳನ್ನು ಪಾವತಿಸುತ್ತಿದ್ದು, ಈ ವಿಧಾನದ ಮೂಲಕ ಸುಮಾರು ರೂ. 18 ಲಕ್ಷಕ್ಕೂ ಹೆಚ್ಚಿನ ಹಣ ಸಂಗ್ರಹವಾಗಿದ್ದಲ್ಲದೆ ದೇಶದ ಸರ್ಕಾರಿ ಸಂಸ್ಥೆಗಳಲ್ಲಿ, ಅಂತರ್ಜಾಲದ ಮೂಲಕ ಅತ್ಯಂತ ಹೆಚ್ಚಿನ ಹಣ ಸಂಗ್ರಹ ಮಾಡುತ್ತಿರುವ ಖ್ಯಾತಿ ಬೆಸ್ಕಾಂದಾಗಿದೆ.

ತದನಂತರ ಮಾತನಾಡಿದ ಸಚಿವರು, ಬೆಸ್ಕಾಂ ಸಹಾಯವಾಣಿ ಕಾರ್ಯತತ್ಪರತೆಯನ್ನು ಪರೀಕ್ಷಿಸಲು ನನ್ನ ಸ್ನೇಹಿತರೊಬ್ಬರಿಗೆ ತಿಳಿಸಿ, ಮಧ್ಯರಾತ್ರಿ 2:30ರ ಸಮಯದಲ್ಲಿ ಕರೆ ಮಾಡಿ, ವಿದ್ಯುತ್ ವ್ಯತ್ಯಯದ ಬಗ್ಗೆ ದೂರು ನೀಡುವಂತೆ ಸಲಹೆ ನೀಡಿದ್ದೆ. ದೂರು ನೀಡಿದ ಕೆಲವೇ ನಿಮಿಷಗಳಲ್ಲಿ ಸಹಾಯವಾಣಿ ಕಚೇರಿಯಿಂದ ಸಂಬಂಧಿತ ವಿಭಾಗಕ್ಕೆ ದೂರು ರವಾನೆಯಾಗಿ, ಇಂಜಿನಿಯರುಗಳು ಕಾರ್ಯತತ್ಪರರಾಗಿ ದೂರಿಗೆ ಅಗತ್ಯ ಕ್ರಮ ಕೈಗೊಂಡು ನನ್ನ ಸ್ನೇಹಿತರಿಗೆ ಮರು ಕರೆ ಮಾಡಿದ್ದನ್ನು ಶ್ಲಾಘಿಸಿದರು.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಆರಂಭಿಸಲಾಗುತ್ತಿದ್ದು, ಬೆಂಗಳೂರಿನ ಯಲಹಂಕ ಬಳಿ ಈ ಘಟಕಕ್ಕಾಗಿ ಸ್ಥಳ ಗುರುತಿಸಲಾಗಿದ್ದು, ಈ ಘಟಕದಿಂದ 350 ದಶಲಕ್ಷ ವಿದ್ಯುತ್ ಉತ್ಪಾದನೆಯಾಗಲಿದೆಯೆಂದು ಎಂದು ತಿಳಿಸಿದರು.

ಇನ್‌ಫೋಸಿಸ್ ಸಂಸ್ಥೆಯಿಂದ ಬೆಸ್ಕಾಂಗೆ ನೀಡಿರುವ ತಂತ್ರಾಂಶದಿಂದ ಬಿಲ್ಲಿಂಗ್‌ನಲ್ಲಿ ಸಾಕಷ್ಟು ತೊಂದರೆಗಳಾಗುತ್ತಿರುವ ವಿಷಯ ತಮ್ಮ ಗಮನಕ್ಕೆ ಬಂದಿದ್ದು, ಈ ಕುರಿತು ಇನ್‌ಫೋಸಿಸ್ ಸಂಸ್ಥೆಯೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲಾಗಿದ್ದು, ತಂತ್ರಾಂಶ ಸುಧಾರಣೆಗಾಗಿ ಕರಾರುವಾಕ್ಕಾದ ಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಬಿಲ್ಲಿಂಗ್ ಸಂಬಂಧಿತ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಪರಿಹಾರ ನೀಡಲು ತಿಳಿಸಲಾಗಿದ್ದು, ತಪ್ಪಿದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ಇನ್‌ಫೋಸಿಸ್‌ಗೆ ನೀಡಲಾಗಿದೆ ಎಂದರು.



ನಿಗಮ ಕಾರ್ಯಾಲಯದಲ್ಲಿರುವ ಬೆಸ್ಕಾಂ ಸಹಾಯವಾಣಿಗೆ ಭೇಟಿ ನೀಡಿದ ಮಾನ್ಯ ಸಚಿವರು, ಸಹಾಯವಾಣಿ ಕಾರ್ಯನಿರ್ವಹಿಸುವ ರೀತಿಯನ್ನು ಪರಿಶೀಲಿಸಿದರು. ತದನಂತರ ಪೀಣ್ಯ 2ನೇ ಹಂತದಲ್ಲಿರುವ ಸ್ವ-ವಿತರಣ ಸೇವಾ ಕೇಂದ್ರ ಹಾಗೂ ಅದರ ಯೋಜನೆಯ ಪರಿಶೀಲನೆ ನಡೆಸಿದರು.

# ಜರ್ಮನಿಯಲ್ಲಿ ಸೂರ್ಯನ ಬೆಳಕಿನಿಂದ ವಿದ್ಯುತ್ ಅನ್ನು ಉತ್ಪಾದಿಸುವ ಕ್ರಮಗಳನ್ನು ಅಧ್ಯಯನ ಮಾಡಲು ಕೈಗೊಂಡ ಶೈಕ್ಷಣಿಕ ಪ್ರವಾಸ

ನೈಸರ್ಗಿಕ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಅನ್ನು ಉತ್ತೇಜಿಸುವ ಉದ್ದೇಶದಿಂದ ದಿನಾಂಕ: 1–06–14 ರಿಂದ 8–06–14ರ ರವರೆಗೆ ಜರ್ಮನಿ ದೇಶದಲ್ಲಿ ಪ್ರವಾಸಮಾಡಿ ಮೇಲ್ಛಾವಣಿಯ ಮೇಲೆ ಸೋಲಾರ್ ಪಿ.ವಿ. ಮಾಡ್ಯುಲ್‌ಗಳನ್ನು ಅಳವಡಿಸಿ ಸೂರ್ಯನ ಬೆಳಕಿನಿಂದ ವಿದ್ಯುತ್ ಅನ್ನು ಉತ್ಪಾದಿಸುವ ಕ್ರಮಗಳನ್ನು ಅಧ್ಯಯನ ಮಾಡಲು ಸೂಕ್ತ ಇಂಜಿನಿಯರ್ ಒಬ್ಬರನ್ನು ಆಯ್ಕೆಮಾಡಿ ಕಳುಹಿಸಲು "ಇಂಡೊ ಜರ್ಮನ್ ಇಂಧನ ಉಳಿತಾಯ ಸಂಸ್ಥೆಯು ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ಇವರಿಗೆ ಒಂದು ಪತ್ರವನ್ನು ಬರೆದಿದ್ದರು.ಈ ಸಂದರ್ಭದಲ್ಲಿ ಶ್ರೀ ಪಂಕಜಕುಮಾರ್ ಪಾಂಡೆ, ವ್ಯವಸ್ಥಾಪಕ ನಿರ್ದೇಶಕರು ನನ್ನನ್ನು ಆಯ್ಕೆಮಾಡಿ ಈ ಪ್ರವಾಸಕ್ಕೆ ಕಳುಹಿಸಿಕೊಟ್ಟಿದ್ದರು. ಇವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಈ ಶೈಕ್ಷಣಿಕ ಪ್ರವಾಸದಲ್ಲಿ ದೇಶದ ವಿವಿಧ ವಿದ್ಯುತ್ ವಿತರಣ ಕಂಪನಿಗಳಿಂದ ಆಯ್ಕೆಗೊಂಡ 32 ಪ್ರತಿಭಾನ್ವಿತ ಅಧಿಕಾರಿಗಳಿದ್ದರು.ದಿನಾಂಕ: 1.06.14 ರಂದು ನಾವು ಭಾರತ ದೇಶದಿಂದ ವಿಮಾನದಲ್ಲಿ ಹೊರಟು ಜರ್ಮನಿಯ ಬರ್ಲಿನ್ ನಗರವನ್ನು ತಲುಪಿದೆವು.

**ದಿನಾಂಕ: 2.06.14 ರಂದು ಬರ್ಲಿನ್ ನಗರದಲ್ಲಿ ಈ ಪ್ರವಾಸದ ಮುಖ್ಯ ಧ್ಯೇಯೋದ್ದೇಶಗಳ ಬಗ್ಗೆ ಕೆಳಕಂಡಂತೆ ಚರ್ಚಿಸಲಾಯಿತು.**

1. ಜರ್ಮನಿಯ ಸೋಲಾರ್ ಪಿ.ವಿ. ವಿದ್ಯುತ್ ಉತ್ಪಾದನೆಯ ಮುಖ್ಯ ಕ್ಷೇತ್ರಗಳನ್ನು ಭೇಟಿನೀಡಿ ಅವುಗಳ ಪ್ರಮುಖ ಅಂಶಗಳನ್ನು ಪರಿಶೀಲಿಸಿ ನಮ್ಮ ದೇಶದಲ್ಲಿ ಅಳವಡಿಸಿ ಕೊಳ್ಳಬಹುದಾದ ತಾಂತ್ರಿಕತೆ–ಯ ಬಗ್ಗೆ ಅಧ್ಯಯನ ಮಾಡುವುದು.

2. ಜರ್ಮನಿ ಮತ್ತು ಭಾರತ ದೇಶಗಳ ಸಹಯೋಗದಿಂದ ನಾವು ಪಡೆದುಕೊಳ್ಳ ಬಹುದಾದ ತಾಂತ್ರಿಕ ನೈಪುಣ್ಯತೆಯ ಕ್ಷೇತ್ರಗಳನ್ನು ಗುರುತಿಸಿ ಈ ತಾಂತ್ರಿಕನೈಪುಣ್ಯತೆಯ ಜ್ಞಾನವನ್ನು ಪಡೆದುಕೊಳ್ಳುವ ಬಗ್ಗೆ ಚರ್ಚೆಮಾಡುವುದು ಇತ್ಯಾದಿಗಳಾಗಿರುತ್ತದೆ.




**ಮ್ಯೂನಿಕ್ ನಗರದಲ್ಲಿ ಆಯೋಜಿಸಿದ್ದ ಜಗತ್‌ಪ್ರಸಿದ್ದವಾದ ಇಂಟರ್ ಸೋಲಾರ್ ಪ್ರದರ್ಶನದಲ್ಲಿ.**



**ಬರ್ಲಿನ್ ನಗರದ ಸೋಲಾರ್ ಪಾರ್ಕ್ "ಅಡ್ಲರ್‌ಶಾಫ್"ಮುಂದೆ ಒಂದು ಛಾಯಾಚಿತ್ರ.**

3. ಜರ್ಮನಿಯಲ್ಲಿ ಸೂರ್ಯನ ಕಿರಣಗಳಿಂದ ವಿದ್ಯುತ್‌ಅನ್ನು ಪಡೆಯುವ ಪ್ರಯತ್ನ 1991ರಲ್ಲಿ ಪ್ರಾರಂಭವಾಗಿದ್ದು ಇಂದಿಗೆ ಸುಮಾರು 14 ಲಕ್ಷ ಮನೆಗಳ ಮೇಲ್ಛಾವಣಿಯ ಮೇಲೆ ಸೂರ್ಯ ಕಿರಣಗಳಿಂದ ವಿದ್ಯುತ್ ಉತ್ಪಾದನೆಯ ಘಟಕಗಳನ್ನು ಅಳವಡಿಸಲಾಗಿದ್ದು ಇದರಿಂದ 36000Mwp ವಿದ್ಯುತ್‌ಅನ್ನು ಪಡೆಯಲಾಗುತ್ತಿದೆ. ಈ ಉತ್ಪಾದನೆಯು ಜರ್ಮನಿ ದೇಶದ ಒಟ್ಟು ವಿದ್ಯುತ್ ಬಳಕೆಯ ಪ್ರಮಾಣದ ಶೇಕಡಾ 30 ರಷ್ಟು ಆಗಿರುತ್ತದೆ.

4. ಈ ಸೂರ್ಯ ಕಿರಣಗಳ ವಿದ್ಯುತ್ ಉತ್ಪಾದನೆಯಿಂದ ಉತ್ತೇಜನಗೊಂಡು ಜರ್ಮನಿಯ ತನ್ನ ಎಲ್ಲಾ ಅಣುವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು 2022ನೆಯ ವೇಳೆಗೆ ಸಂಪೂರ್ಣವಾಗಿ ತಟಸ್ಥವಾಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ.

ಜರ್ಮನಿಯಲ್ಲಿ "ಅಗೋರಾ ಎನರ್ಜಿ ವೆಂಡೇ"ಎಂಬ ಮುಂದಾಲೋಚನಾ ಸಂಸ್ಥೆ (Think Tank) ಮುಂದಿನ ಎಲ್ಲಾ ಯೋಜನೆಗಳ ರೂಪು ರೇಷೆಗಳನ್ನು ನಿರ್ಧರಿಸುತ್ತದೆ.

ಈ ಸಂಸ್ಥೆಯ ಸೂರ್ಯಕಿರಣಗಳಿಂದ ಅಧಿಕ ಕ್ಷಮತೆಯುಳ್ಳ ಉತ್ತಮ ಗುಣಮಟ್ಟದ ಪಿ.ವಿ. ಸೆಲ್‌ಗಳನ್ನು ತಯಾರಿಸಲು ಅಗಾಧ ಪ್ರಮಾಣದ ಹಣವನ್ನು ವಿವಿಧ ಪ್ರಯೋಗಗಳನ್ನು ನಡೆಸಲು ವಿನಿಯೋಗಿಸುತ್ತಿದೆ.

**ದಿನಾಂಕ: 3.06.14ರಂದು ನಮ್ಮ ನಿಯೋಗವು ಬರ್ಲಿನ್ ನಗರದಲ್ಲಿರುವ "ಅಡ್ಲರ್‌ಶಾಫ್" ಎಂಬ "ಸೋಲಾರ್ ಪಾರ್ಕ್"ಗೆ ಭೇಟಿ ನೀಡಿತು.**

1. ಈ "ಅಡ್ಲರ್‌ಶಾಫ್" "ಸೋಲಾರ್ ಪಾರ್ಕ್"ನಲ್ಲಿ 23,000 ಜನ ಕಾರ್ಯ ನಿರ್ವಹಿಸುತ್ತಿದ್ದು ಇವರು ಇಲ್ಲಿನ ವಿವಿಧ ಸಂಶೋಧನಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ. ಇಲ್ಲಿನ ಸೋಲಾರ್ ಕಾರ್ಯಕ್ರಮವು 1991 ರಿಂದ ಕಾರ್ಯ ನಿರ್ವಹಿಸುತ್ತಿದೆ.

2. ಈ ಅಡ್ಲರ್‌ಶಾಫ್ ಸೋಲಾರ್ ಪಾರ್ಕ್ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಂತಿದ್ದು 1000ಕ್ಕೂ ಹೆಚ್ಚು ಸೋಲಾರ್‌ನ ಉಪಕರಣಗಳನ್ನು

ತಯಾರಿಸುವ ಕಾರ್ಖಾನೆ ಕಛೇರಿಗಳಿರುತ್ತವೆ ಮತ್ತು ಇಲ್ಲಿ ಕಾರ್ಖಾನೆ ಕಛೇರಿಗಳಲ್ಲಿ ಕೆಲಸಮಾಡುವವರಿಗೂ ಸಹ ಇಲ್ಲಿಯೇವಸತಿ ಸೌಕರ್ಯ ಕಲ್ಪಿಸಿದ್ದು ಇವರ ಪ್ರಯಾಣದ ಸಮಯವನ್ನು ಕಡಿಮೆ ಮಾಡಿದೆ.

3. ಅಡ್ಲರ್‌ಶಾಫ್ ಸೋಲಾರ್ ಪಾರ್ಕ್‌ನ ವಿಸ್ತೀರ್ಣ 4.2 ಚದರ ಕಿ.ಮೀ ಇದ್ದು ಈ ಪ್ರಾಂಗಣದಲ್ಲಿ ಸೋಲಾರ್ ವಿಷಯದಲ್ಲಿ ವ್ಯಾಸಂಗ ನಡೆಸಲು "ಹುಂಬೋಲ್ಟ್ ವಿಶ್ವವಿದ್ಯಾಲಯದ" ಆರು ವಿಭಾಗಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಲ್ಲಿ ಸುಮಾರು 380 ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದು ಈ ವಿಶ್ವವಿದ್ಯಾಲಯದ ಆಧಿಕಾರಿ/ನೌಕರರಿಗಾಗಿ ಸುಮಾರು 1000ಕ್ಕೂ ಹೆಚ್ಚು ಫ್ಲಾಟ್‌ಗಳೂ ಸಹ ಇರುತ್ತವೆ.

**04.06.14ರಂದು ಜರ್ಮನಿಯ ಮಧ್ಯಭಾಗದ ಕಾಸೆಲ್ ನಗರದಲ್ಲಿರುವ "ಪ್ರಾನ್ ಹೋಫರ್ ಸೋಲಾರ್ ಮತ್ತು ಗಾಳಿ ಇಂಧನದ ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿದೆವು.**

ಈ ಸಂಸ್ಥೆಯಲ್ಲಿ ಸೋಲಾರ್ ಥಿನ್ ಫಿಲಂ, ಮಾನೋ ಹಾಗೂ ಪಾಲಿ ಕ್ರಿಸ್ಟಲೈನ್ ಪಿ.ವಿ. ಮಾಡ್ಯೂಲ್‌ಗಳ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವ ಸಲುವಾಗಿ ಸಂಶೋಧನೆ ನಡೆಯುತ್ತಿದೆ. ಈ ಸಂಶೋಧನಾ ಸಂಸ್ಥೆಯನ್ನು ಅನುಸರಿಸಿ ಬೆಂಗಳೂರಿನಲ್ಲಿ ನಮ್ಮ ದೇಶದ ಪರಿಸರ ವಾತಾವರಣಕ್ಕೆ ಹೊಂದಿಕೊಳ್ಳುವ ಒಂದು ಸಂಶೋಧನಾ ಸಂಸ್ಥೆಯನ್ನು ಆರಂಭಿಸಬಹುದಾಗಿದೆ.

05.06.14ರಂದು ನ್ಯೂರೆಂಬರ್ಗ್ ನಗರದಲ್ಲಿನ "ಸೀಮೆನ್ಸ್ ಪವರ್ ಅಕಾಡೆಮಿ"ಗೆ ಭೇಟಿನೀಡಿ ಇಲ್ಲಿನ ಪ್ರತಿಭಾನ್ವಿತ "ಸೋಲಾರ್ ಮತ್ತು ಸ್ಮಾರ್ಟ್ ಗ್ರಿಡ್"ನ ತಜ್ಞರೊಡನೆ ಇಂಧನ ಉಳಿತಾಯದಲ್ಲಿ ಬರಬಹುದಾದ ಅಡಚಣೆಗಳನ್ನು ನಿವಾರಿಸುವಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಕೆಮಾಡುವ ವಿಧಾನಗಳ ಬಗ್ಗೆ ಚರ್ಚಿಸಲಾಯಿತು.

"ಸೀಮನ್ಸ್" ಕಂಪನಿಯ ಧ್ಯೇಯ "ನಾವು ಬದಾಲಾಗುತ್ತಿರುವ ಜಗತ್ತಿನಲ್ಲಿ ವಾಸ ಮಾಡುತ್ತಿಲ್ಲ, ನಾವು ಜಗತ್ತಿನಲ್ಲಿ ಬದಲಾವಣೆಯನ್ನು ಮಾಡುತ್ತಿದ್ದೇವೆ", ಈ ಧ್ಯೇಯ ಎಷ್ಟು ಸಮಂಜಸವಾಗಿದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ.ನಂತರ ಜರ್ಮನಿಯ ಪ್ರಮುಖವಾದ ಸೋಲಾರ್ ಇನ್ವರ್ಟರ್ ಎಸ್.ಎಮ್.ಎ ಕಾರ್ಖಾನೆಗೆ ಬೇಟಿನೀಡಿದಾಗ ಜರ್ಮನ್ ದೇಶದ ಅತ್ಯುತ್ತಮ ಗುಣಮಟ್ಟ ಮತ್ತು ಇವರ ನಿಖರತೆ ಮತ್ತು ಸ್ವಚ್ಛತೆಗಳನ್ನು ನೋಡಿ ಆಶ್ಚರ್ಯ ಪಡುವಂತಾಯಿತು.

06.06.14ರಂದು ನಮ್ಮ ಪ್ರವಾಸದ ನಿಯೋಗವು ಮ್ಯೂನಿಕ್ ನಗರದಲ್ಲಿ ಜಗತ್ಪ್ರಸಿದ್ದವಾದ "ಇಂಟರ್ ಸೋಲಾರ್ ವಸ್ತು ಪ್ರದರ್ಶನ" ವನ್ನು ವೀಕ್ಷಿಸಿದೆವು.

07.06.14 ರಂದು ನಾವು "ಎನರ್ಜಿ ನಿಯಮಿತ" ಎಂಬ ವಿದ್ಯುತ್ ವಿತರಣೆ ಕಂಪನಿಯ ಅಧಿಕಾರಿಗಳ ನಡುವೆ ಸಂವಾದ ನಡೆಸಿ ಸೋಲಾರ್ ಘಟಕಗಳಿಂದ ಆಗಬಹುದಾದ ಅಡಚಣೆಗಳು ಮತ್ತು ಈ ಅಡಚಣೆಗಳ ನಿವಾರಣೆ ಬಗ್ಗೆ ಚರ್ಚಿಸಲಾಯಿತು.

ಈ ಜರ್ಮನಿ ಪ್ರವಾಸವನ್ನು ಅತ್ಯಂತ ಕಡಿಮೆ ಸಮಯದಲ್ಲಿ ಆಯೋಜಿಸಲಾಗಿದ್ದು ತಮ್ಮ ಎಲ್ಲಾ ಕಾರ್ಯಕ್ರಮ, ಆಯೋಜನೆಗಳಲ್ಲಿ ಎಳ್ಳಷ್ಟು ಬದಲಾವಣೆ ಮಾಡದೆ ನಿಯೋಗದ ಸದಸ್ಯರಿಗೆ ಜರ್ಮನಿಯಲ್ಲಿ ಸುಮಾರು 1000ಕ್ಕೂ ಹೆಚ್ಚು ಮೈಲಿಗಳಷ್ಟು ದೂರ ಪ್ರಯಾಣ ಮಾಡಿ ಸೂರ್ಯನ ಬೆಳಕಿನಿಂದ ವಿದ್ಯುತ್ ಅನ್ನು ಉತ್ಪಾದಿಸುವ ತಂತ್ರಜ್ಞಾನದ ಕಿರು ಪರಿಚಯವನ್ನು ನಮಗೆ ನೀಡಿ ತಮ್ಮ ಹಿರಿಮೆಯನ್ನು ಮೆರೆದಿರುತ್ತಾರೆ. ಹೀಗೆ ಜರ್ಮನಿಯ ಶೈಕ್ಷಣಿಕ ಪ್ರವಾಸ ನಮ್ಮ ಮನದಲ್ಲಿ ಮರೆಯಲಾಗದ ಘಟನೆಯಾಗಿ ಉಳಿಯಿತು.

**-ಎಲ್. ಲಕ್ಷ್ಮೀಪತಿ**
ಉಪಪ್ರಧಾನ ವ್ಯವಸ್ಥಾಪಕರು
ಬೇಡಿಕೆಗೆ ತಕ್ಕಂತೆ ನಿರ್ವಹಣೆಯ ವಿಭಾಗ,

# ಸೂರ್ಯ ರೈತ

ನಾಡಿನ ಸಮಸ್ತ ರೈತಬಾಂಧವರಿಗೆ ಇದು ಸಂತಸದ ಸುದ್ದಿ. ರಾಜ್ಯದ ಇತಿಹಾಸದಲ್ಲೆ ಮೊಟ್ಟಮೊದಲ ಬಾರಿಗೆ ಕೃಷಿ ಭೂಮಿಯಲ್ಲಿ ಸೌರಫಲಕಗಳನ್ನು ಅಳವಡಿಸಿ ಸೌರಶಕ್ತಿಯನ್ನು ಉತ್ಪಾದಿಸುವ ಮೂಲಕ ರೈತರು ಸ್ವಾವಲಂಬಿಗಳಾಗುವ ವಿಶಿಷ್ಟ ಯೋಜನೆಯನ್ನು ಇಂಧನ ಇಲಾಖೆ ಜಾರಿಗೆ ತಂದಿದೆ.



ಸೌರಶಕ್ತಿಯನ್ನು ಎಲ್ಲ ಶಕ್ತಿಮೂಲಗಳಿಗೆ ಪರ್ಯಾಯ ಶಕ್ತಿ ಎಂದೇ ಹೇಳಲಾಗುತ್ತದೆ. ಈ ನಿಸರ್ಗದತ್ತ ಶಕ್ತಿಯನ್ನು ಸದುಪಯೋಗ ಪಡೆಸಿಕೊಳ್ಳುವ ಸಲುವಾಗಿ ಸರ್ಕಾರವು 2014-2021 ನವೀಕೃತ ಸೌರಕಾಯಿದೆಯನ್ನು ಜಾರಿಗೆ ತಂದಿದೆ. ಸರ್ಕಾರವು ಕೃಷಿಕ್ಷೇತ್ರಕ್ಕೆ ಉಚಿತವಾಗಿ ವಿದ್ಯುತ್ ಪೂರೈಸುವ ಪರಿಣಾಮವಾಗಿ ಪ್ರತಿವರ್ಷವೂ ಸಬ್ಸಿಡಿಯ ಪ್ರಮಾಣವನ್ನು ಏರಿಸ ಬೇಕಾಗುತ್ತಿದೆ. ದೇಶಾದ್ಯಂತ ವಿದ್ಯುತ್ ಕೊರತೆಯಿರುವ ಈ ಸಂದರ್ಭದಲ್ಲಿ, ಸೌರವಿದ್ಯುತ್ ಶಕ್ತಿಯು, ಪರ್ಯಾಯ ಶಕ್ತಿಯಾಗಿ ಕೃಷಿಕರಿಗೆ ಬಲನೀಡಲಿದೆ.

ರೈತನೊಬ್ಬ ತನಗೆ ಬೇಕಾದಷ್ಟು ವಿದ್ಯುತ್ ಉತ್ಪಾದಿಸಿ ಹೆಚ್ಚುವರಿ ವಿದ್ಯುತನ್ನು ಬೆಸ್ಕಾಂ ಗ್ರಿಡ್‌ಗೆ ಪೂರೈಸಿ ಆದಾಯ ಕೂಡ ಗಳಿಸಬಹುದು. ರೈತರು ತಮ್ಮ ಸೋಲಾರ ಘಟಕದಲ್ಲಿ ಉತ್ಪಾದಿಸಿದ ವಿದ್ಯುತನ್ನು ದ್ವಿಮುಖ ವ್ಯವಸ್ಥೆಯುಳ್ಳ ಮೀಟ-ರ್ ಅಳವಡಿಸಿ ಬೆಸ್ಕಾಂ ಗ್ರಿಡ್‌ಗೆ ಪೂರೈಸುವ ವ್ಯವಸ್ಥೆಯನ್ನು ಮಾಡಲಾಗುವುದು.

ಮೀಟರ್ ಹೊಂದಿರುವ ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸುವ ಮೂಲಕ ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡಬಹುದು. ಈ ಮೂಲಕ ಗ್ರಾಹಕರು ತಮ್ಮ ಮಾಸಿಕ ಬಿಲ್ಲಿನಲ್ಲಿ ಉಳಿತಾಯಮಾಡಬಹುದು. ಇದರಿಂದಾಗಿ ನಗರ ಪ್ರದೇಶಗಳಲ್ಲಿ ಡಿಜಿ ಸೆಟ್‌ಗಳ ಅನವಶ್ಯಕ ಬಳಕೆಗೆ ಕಡಿವಾಣ ಹಾಕಬಹುದು ಮತ್ತು ಗ್ರಾಮೀಣ ಕ್ಷೇತ್ರಗಳಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೂ ವಿದ್ಯುತ್ ಪೂರೈಸಿಕೊಳ್ಳಬಹುದು.

# Replacement of ELECTRO MECHANICAL METERS by Electro Static Meters

In BMAZ area, it was found that there are around 15,00,000 single phase electro mechanical meters and 1,00,000 three phase electro mechanical meters which had to be replaced by Electrostatic metersfor accurate energy consumption in meter. And added benefit, MD(KVA), maximum demand in a month can be recorded in Electrostatic metersand can be used while monthly energy billing. Thus, more exact billing as per usage and also penalising for unauthorised excess power used can be accounted to the revenue of BESCOM.



A pilot study was conducted during Jan-2013 to May-13 to analyse the cost incurred for replacement of electro mechanical meters by Electrostatic meters against revenue realization. It was found that the cost of Electrostatic meter can be recovered approximately in 6 to 8 months cumulatively. After 8 months, revenue will be added every month.



Meter replacement work has been carried out from 11th August 2014 in Bangalore North Circle jurisdiction and till today 24364 meters have been replaced with new meters. At the rate of around 1500 numbers of meters were replaced every day by forming the team of Junior Engineer (Ele), Lineman/Mechanic along with project engineer. This team is exclusively deputed to meter change work. And the meter change is effected in Infosys billing software on the same day and it is ensured that the billing efficiency is not hampered. MD, BESCOM has also visited the field during meter replacement work.

-VENKATASHIVA REDDY,
SE, North Circle

## ಬದಲಾಗಿದೆ ಬೆಸ್ಕಾಂ ಸಹಾಯವಾಣಿ ಸಂಖ್ಯೆ



ಬೆಸ್ಕಾಂ ಸಹಾಯವಾಣಿ ಸಂಖ್ಯೆ **080-22873333** ಈಗ **1912** ಎಂದು ಬದಲಾಗಿದೆ. ನಾಲ್ಕು ಅಂಕಿಗಳ ಸಹಾಯವಾಣಿಯ ಸಂಖ್ಯೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸುಲಭ. ಹೀಗಾಗಿ ಗ್ರಾಹಕರ ಹಿತದೃಷ್ಟಿಯಿಂದ ಕಂಪನಿಯು ಈ ಬದಲಾವಣೆಯನ್ನು ತಂದಿದೆ. ತಮ್ಮ ವಿಭಾಗದ ಎಲ್ಲಾ ಗ್ರಾಹಕರಿಗೆ ಬದಲಾದ ಈ ಸಹಾಯವಾಣಿಯ ಹೊಸ ಸಂಖ್ಯೆಯನ್ನು ಪರಿಚಯಿಸಿ ಜನಪ್ರಿಯಗೊಳಿಸಿ. ಸ್ಥಿರ ಹಾಗೂ ಮೊಬೈಲ್ ದೂರವಾಣಿಯಿಂದ ಯಾವುದೇ ಎಸ್.ಟಿ.ಡಿ.ಕೋಡ್ ಇಲ್ಲದೆ 1912ಕ್ಕೆ ನೇರವಾಗಿ ಕರೆ ಮಾಡಬಹುದು.

# ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

**ದಿನಾಂಕ 22.07.2010ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಐಎಸ್: ಡಿ: 07: 10, ದಿನಾಂಕ 01.07.2010ರ ಪ್ರಕಾರ ತಿದ್ದುಪಡಿಗೊಂಡ ಆವೃತ್ತಿ**

ಕರ್ನಾಟಕ ರಾಜ್ಯ ಸರ್ಕಾರವು, ಸಂಖ್ಯೆ ಇಎನ್ 396 ಎನ್‌ಸಿಇ 2006, ದಿನಾಂಕ 13.11.2007ರ ಪ್ರಕಾರ ಕೆಳಕಂಡ ಪ್ರವರ್ಗದ ಕಟ್ಟಡಗಳಲ್ಲಿ ಸೌರಶಕ್ತಿ ನೀರು ಕಾಯಿಸುವ ಯಂತ್ರವನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಅಧಿಸೂಚಿಸಿದೆ:

**i. ಕಾರ್ಯಪ್ರಕ್ರಿಯೆ ಅಥವಾ ಪೂರಕ ಉದ್ದೇಶಗಳಿಗಾಗಿ ಬಿಸಿ ನೀರಿನ ಅವಶ್ಯಕತೆ ಇರುವ ಕೈಗಾರಿಕೆಗಳು**

i. ಸರ್ಕಾರದ ಆಸ್ಪತ್ರೆಗಳನ್ನೂ ಒಳಗೊಂಡಂತೆ, ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳು

ii. ಹೋಟೆಲ್‌ಗಳು, ರೆಸ್ಟಾರೆಂಟುಗಳು, ಮೋಟೆಲ್‌ಗಳು, ಬಾಂಕ್ವೆಟ್ ಹಾಲ್ ಮತ್ತು ಅತಿಥಿ ಗೃಹಗಳು

iii. ಜೈಲು ವಠಾರ, ಕ್ಯಾಂಟೀನುಗಳು

iv. ಗ್ರೂಪ್ ಹೌಸಿಂಗ್ ಸೊಸೈಟಿಗಳು/ಗೃಹಮಂಡಲಿಗಳು/ಇತರ ಅಭಿವೃದ್ಧಿದಾರರು ನಿರ್ಮಿಸಿರುವ ಗೃಹ ಸಂಕೀರ್ಣಗಳು

v. ಪೌರಸಂಸ್ಥೆಗಳು, ಪಾಲಿಕೆಗಳು, ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ 1200 ಚದರ ಅಡಿ ನಿವೇಶನದಲ್ಲಿ 600 ಚದರ ಅಡಿ ಹಾಗೂ ಹೆಚ್ಚಿನ ಅಳತೆಯಲ್ಲಿ ನಿರ್ಮಿಸಿರುವ ನಿವಾಸಿ ಕಟ್ಟಡಗಳು

vi. ಸರ್ಕಾರದ ಎಲ್ಲಾ ಕಟ್ಟಡಗಳು/ನಿವಾಸಿ ಶಾಲೆಗಳು/ಎಲ್ಲಾ ಶಿಕ್ಷಣ ಸಂಸ್ಥೆಗಳು/ತಾಂತ್ರಿಕ/ಔದ್ಯೋಗಿಕ ಶಿಕ್ಷಣ ಸಂಸ್ಥೆಗಳು/ಎಲ್ಲಾ ತರಬೇತಿ ಸಂಸ್ಥೆಗಳು/ಹಾಸ್ಟೆಲ್‌ಗಳು/ಪ್ರವಾಸಿ ಸಂಕೀರ್ಣಗಳು/ ವಿಶ್ವವಿದ್ಯಾಲಯಗಳು/ಸಮುದಾಯ ಕೇಂದ್ರಗಳು/ ತಂಗುವ ವ್ಯವಸ್ಥೆಯನ್ನು ಹೊಂದಿರುವ ಕಲ್ಯಾಣ ಮಂಟಪಗಳು.

**ಮೇಲಿನ ಕಲಮಿನ ಪ್ರಕಾರ ಸೌರಶಕ್ತಿ ನೀರು ಕಾಯಿಸುವ ಯಂತ್ರವನ್ನು ಸ್ಥಾಪಿಸುವುದಾಗಿ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಸೂಚಿಸಿರತಕ್ಕದ್ದು ಮತ್ತು ಕಾರ್ಯಾದೇಶವನ್ನು ನೀಡುವುದಕ್ಕೆ ಮುಂಚಿತವಾಗಿ ಆ ರೀತಿ ಸೌರಶಕ್ತಿ ನೀರು ಕಾಯಿಸುವ ಯಂತ್ರವನ್ನು ಸ್ಥಾಪಿಸಿರುವುದಾಗಿ ಖಾಲಿ ಕಾಗದದ ಮೇಲೆ ವಾಗ್ದಾನ ಪತ್ರವನ್ನು ಒಪ್ಪಂದದ ಪತ್ರ, ಕಾರ್ಯಸಮಾಪನಾ ವರದಿ/ವೈರಿಂಗ್ ನಕ್ಷೆಯೊಂದಿಗೆ ಸಲ್ಲಿಸತಕ್ಕದ್ದು.**

1. ಲೈಸೆನ್ಸುದಾರರು, ಅರ್ಜಿಯನ್ನು ಸ್ವೀಕರಿಸುವ ಸಮಯದಲ್ಲಿ, ಅರ್ಜಿ ಹಾಗೂ ಅರ್ಜಿಯ ಜೊತೆಯಲ್ಲಿ ಲಗತ್ತಿಸಿರುವ ಆಡಕಗಳನ್ನು ಪರಿಶೀಲಿಸಿ, ಅರ್ಜಿಯು ಎಲ್ಲ ರೀತಿಯಲ್ಲಿ ಪೂರ್ಣವಾಗಿದೆ ಎಂದು ಖಚಿತಪಡಿಸಿಕೊಂಡ ನಂತರವೇ, ಅರ್ಜಿದಾರರಿಗೆ ಅರ್ಜಿಯನ್ನು ಸ್ವೀಕರಿಸಿರುವುದಕ್ಕೆ ತಲುಪೊಪ್ಪಿಗೆಯನ್ನು ನೀಡತಕ್ಕದ್ದು.
2. ಅರ್ಜಿಯನ್ನು ಭರ್ತಿ ಮಾಡಲು ಅರ್ಜಿದಾರರಿಗೆ ನೆರವು ಬೇಕಾದರೆ, ಲೈಸೆನ್ಸುದಾರರ ಸ್ಥಳೀಯ ಕಚೇರಿಯು ಸೂಕ್ತ ನೆರವನ್ನು ಒದಗಿಸತಕ್ಕದ್ದು. ಅಂತಹ ನೆರವನ್ನು ಒದಗಿಸಲು ಲೈಸೆನ್ಸುದಾರರು ಒಬ್ಬ ಸಿಬ್ಬಂದಿಯನ್ನು ಗೊತ್ತುಪಡಿಸಬೇಕು ಅಥವಾ ನಾಮನಿರ್ದೇಶನಗೊಳಿಸಬೇಕು.

**3. ದಿನಾಂಕ 20.03.2008ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಐಎಸ್: ಡಿ: 07: 08, ದಿನಾಂಕ 14.03.2008ರ ಪ್ರಕಾರ ತಿದ್ದುಪಡಿಗೊಂಡ ಆವೃತ್ತಿ**

ಕಟ್ಟಡ/ಆವರಣಕ್ಕೆ, ಎಚ್.ಟಿ.ಅಥವಾ ಎಲ್.ಟಿ ಅಥವಾ ಎಚ್.ಟಿ.ಮತ್ತು ಎಲ್.ಟಿ.ಇವೆರಡನ್ನೊಳಗೊಂಡ ಪ್ರತ್ಯೇಕ ನಿರ್ದಿಷ್ಟ ಸೇವಾ ಮುಖ್ಯ ಮಾರ್ಗದ ಮೂಲಕ ಸರ್ವ ಸಾಮಾನ್ಯ ಪ್ರತ್ಯೇಕ ಬಿಂದುವಿನ ಸೌಲಭ್ಯದ ಏಕ ಮೂಲದಿಂದ ವಿದ್ಯುತ್ ಸರಬರಾಜಿನ ಏರ್ಪಾಡನ್ನು ಮಾಡಬಹುದಾಗಿದೆ.ಸೇವಾ ಮುಖ್ಯ ಮಾರ್ಗದ ಕೇಬಲ್ಲು ಪ್ರತ್ಯೇಕ ಹಾಗೂ ನಿರ್ದಿಷ್ಟವಾಗಿ ಪ್ರತ್ಯೇಕಿತ ಅನನ್ಯತೆಯನ್ನು ಹೊಂದಿರತಕ್ಕದ್ದು.ಮಾಪಕ ಸಲಕರಣೆಗಳ ವ್ಯವಸ್ಥೆಯನ್ನು ನೆಲಮನೆಯಲ್ಲಿ ಮಾತ್ರ ಮಾಡತಕ್ಕದ್ದು.ಆ ಕಟ್ಟಡ ಅಥವಾ ಆವರಣದಲ್ಲಿರುವ ವಿವಿಧ ಪ್ರವರ್ಗದ ಗ್ರಾಹಕರಿಗೆ ಸರ್ವ ಸಾಮಾನ್ಯ ಪ್ರತ್ಯೇಕ ಬಿಂದುವಿನ ಸೌಲಭ್ಯವಿರುವ ಪ್ರತ್ಯೇಕ ಐಎಲ್‌ಗಳ ಮೂಲಕ ನೀಡಬಹುದಾಗಿದೆ.

ಅಂತಹ ಏರ್ಪಾಡನ್ನು ಮಾಡುವಾಗ, ಆ ಆವರಣಕ್ಕೆ ವಿವಿಧ ರೀತಿಯ ಮೂಲಕ ವಿದ್ಯುತ್ ಸರಬರಾಜಿನ ಸೌಲಭ್ಯ ನೀಡುವಾಗ, ಲೈಸೆನುದಾರರು ಗ್ರಾಹಕ/ಗ್ರಾಹಕರಿಂದ ಸುರಕ್ಷತೆಯ ಖಚಿತತೆ ಬಗ್ಗೆ ಮುಚ್ಚಳಿಕೆ ಪತ್ರವನ್ನು ಪಡೆಯತಕ್ಕದ್ದು.

**ಹಳೆಯ ಆವೃತಿ: ಅರ್ಜಿದಾರರ ಆವರಣಕ್ಕೆ ಕೇವಲ ಒಂದು ಮಾರ್ಗದಿಂದ ವಿದ್ಯುತ್ ಸರಬರಾಜನ್ನು ಒದಗಿಸಲಾಗುವುದು.**

*.....ಮುಂದುವರಿಯುವುದು*


## ಪದದಾಟ

ಈ ತ್ರೈಮಾಸಿಕ ಸಂಚಿಕೆಯಲ್ಲಿ, ಸರ್ವ ಸಾಮಾನ್ಯವಾಗಿ ಭಾರತದಲ್ಲಿ ಬಳಕೆಯಲ್ಲಿರುವ, ಆದರೆ ಅಮೆರಿಕನ್ ಇಂಗ್ಲಿಷ್ ನಿಘಂಟಿನ ಪ್ರಕಾರ ಬಳಕೆಯಲ್ಲಿಲ್ಲದ ಒಂದು ಮುಖ್ಯಪದದ ಬಗ್ಗೆ ತಿಳಿದುಕೊಳ್ಳೋಣ. ಸಾಮಾನ್ಯವಾಗಿ, ನಾವು **Prepone** ಎಂಬ ಪದವನ್ನು ಆಗಾಗ್ಗೆ ಬಳಸುತ್ತಿರುತ್ತೇವೆ. ನಮ್ಮ ಭಾರತೀಯ ಬಹುತೇಕ ನಿಘಂಟುಗಳಲ್ಲೂ ಸಹ ಈ ಪದದ ಬಗ್ಗೆ ಮಾಹಿತಿ ಲಭ್ಯವಿಲ್ಲ. **Postpone** ಎಂಬ ಪದಕ್ಕೆ ವಿರುದ್ಧವಾಗಿ **Prepone** ಪದವನ್ನು ಬಳಸುತ್ತಿದ್ದೇವೆ. ವಾಸ್ತವಿಕವಾಗಿ **Postpone** ಎಂಬ ಪದಕ್ಕೆ ವಿರುದ್ಧ ಪದ **Advanced** ಎಂದು. **Advanced** ಎಂದರೆ ಮುನ್ನೇರ್ಪಾಡು ಎಂದರ್ಥ.

ಆತ್ಮೀಯ ಉದ್ಯೋಗಿ ಮಿತ್ರ ಓದುಗರೆ, ಪದದಾಟಕ್ಕೆ ಪ್ರೋತ್ಸಾಹಿಸಿ, ನಿಮ್ಮ ಪ್ರಯತ್ನದ ಮೂಲಕ ಮುಂದುವರೆಸಿ. ಮುಂದಿನ ತ್ರೈಮಾಸಿಕ ಸಂಚಿಕೆಗೆ ನಿಮ್ಮ ಕೊಡುಗೆಯನ್ನು ನಿರೀಕ್ಷಿಸುತ್ತೇವೆ.

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು-3

# ಡಾ. ಕೆ. ಶಿವರಾಮ ಕಾರಂತ



ಇಪ್ಪತ್ತನೆಯ ಶತಮಾನ ಕಂಡ ಅಪರೂಪದ ವ್ಯಕ್ತಿ, ಕಾದಂಬರಿಕಾರ, ಯಕ್ಷಗಾನ ಕಲಾವಿದ, ಪರಿಸರ ತಜ್ಞ, ಮಕ್ಕಳ ಪ್ರೀತಿಯ 'ಅಜ್ಜ', ಕಡಲತೀರದ ಭಾರ್ಗವ, ನಡೆದಾಡುವ ವಿಶ್ವಕೋಶ ಎಂದೇ ಖ್ಯಾತರಾಗಿದ್ದಾರೆ ಜ್ಞಾನಪೀಠ ಪುರಸ್ಕೃತ ಡಾ. ಕೋಟಾ ಶಿವರಾಮ ಕಾರಂತರು.

ವಯಸ್ಸಿನ ದಣಿವು ಮರೆತು, ಜ್ಞಾನ ದಾರಿಯಲ್ಲಿ ಜನರನ್ನು ಕೊಂಡೊಯ್ದು, ಮಕ್ಕಳಿಂದ, ವಯೋವೃದ್ಧರ ವರೆಗೆ ಸಾಹಿತ್ಯ ಕೃಷಿ ಮಾಡಿಸಿದ, ಜ್ಞಾನಪೀಠ, ಪದ್ಮಭೂಷಣ, ಪಂಪ ಪ್ರಶಸ್ತಿ, ನಾಡೋಜ ಪುರಸ್ಕಾರ, ಹಲವು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿ ಪಡೆದ, ವಿಶ್ವ ಪ್ರೇಮಿ ಹಾಗೂ ಮಾನವತಾವಾದಿ ಕಾರಂತರು ಜ್ಞಾನ ಕ್ಷಿತಿಜವನ್ನು ಎಂಟು ದಿಕ್ಕಿಗೆ ಚಾಚಿದ ಅಕ್ಷರ ಪ್ರೇಮಿಯಾಗಿದ್ದರು. ಕವನ, ನಾಟಕ, ಕಾದಂಬರಿ, ಕಥೆ, ಪ್ರವಾಸ ಸಾಹಿತ್ಯ, ಹರಟೆ, ಮಕ್ಕಳ ವಿಶ್ವಕೋಶ, ವಿಜ್ಞಾನ ವಿಶ್ವಕೋಶ, ಜೀವನ ಚರಿತ್ರೆ, ಯಕ್ಷಗಾನ, ಜಾನಪದ, ಚಲನಚಿತ್ರ, ಅನುವಾದ, ಅರ್ಥಕೋಶ, ಪ್ರಾಣಿ ಪಕ್ಷಿ ಪರಿಸರ ಹೀಗೆ ಹಲವಾರು ವೈವಿಧ್ಯಮಯ ವಿಷಯಗಳಲ್ಲಿ ಕೃತಿರಚನೆ ಮಾಡಿದ್ದಾರೆ.

ಉಡುಪಿ ಜಿಲ್ಲೆಯ ಕೋಟಾದಲ್ಲಿ 1902 ಅಕ್ಟೋಬರ್ 10 ರಂದು ಇವರ ಜನನ. ಓದು ಕೇವಲ ಎಸ್ಸೆಸ್ಸೆಲ್ಸಿ. ವಿದ್ಯಾರ್ಥಿ ದೆಸೆಯಲ್ಲೆ ಮಹಾತ್ಮಾ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಓದು ನಿಲ್ಲಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ ಏಳು ದಶಕಗಳಲ್ಲಿ ಅಭಿವ್ಯಕ್ತಗೊಂಡ ಅವರ ಬದುಕು ಸಾಹಿತ್ಯ, ಸಾಮಾಜಿಕ ಜಾಗೃತಿ, ರಾಜಕೀಯ ಹೋರಾಟ, ಪರಿಸರ ಸಂರಕ್ಷಣೆ ಮುಂತಾದ ಹತ್ತು ಹಲವು ದಿಕ್ಕುಗಳಲ್ಲಿ ಪಸರಿಸಿದೆ.

ಯಕ್ಷಗಾನ ಕಲೆ ಕಾರಂತರ ಮತ್ತೊಂದು ಆಸಕ್ತಿಯ ಕ್ಷೇತ್ರ. ಅವರ ಯಕ್ಷಗಾನ ಬಯಲಾಟ ಕೃತಿಗೆ 1959ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. ಯಕ್ಷಗಾನ ಕಲೆಯನ್ನು ವಿಶ್ವಕ್ಕೆ ಪರಿಚಯಿಸಿದ ಕೀರ್ತಿ ಕಾರಂತರಿಗೆ ಸಲ್ಲುತ್ತದೆ.ಭೂತರಾಜ್ಯ, ಡೊಮಿಂಗೋ ಎಂಬ ಮೂಕಿ ಚಿತ್ರಗಳನ್ನು ಅವರು ನಿರ್ದೇಶಿಸಿದರು.ನಟ, ನಿರ್ದೇಶಕ, ನಿರ್ಮಾಪಕರಾಗಿ ಚಿತ್ರರಂಗದಲ್ಲಿ ಅಪಾರ ಅನುಭವವನ್ನೂ ಪಡೆದರು. ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು, ಬೆಟ್ಟದ ಜೀವ, ಚೋಮನ ದುಡಿ... ಹೀಗೆ ಹಲವಾರು ಕಾದಂಬರಿಗಳನ್ನು ರಚಿಸಿದರು.1978ರಲ್ಲಿ ಮೂಕಜ್ಜಿಯ ಕನಸು ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು.ಈ ಪ್ರಶಸ್ತಿ ಪಡೆದ ಕನ್ನಡದ ಮೇರು ಸಾಹಿತಿಗಳಲ್ಲಿ ಕಾರಂತರು ಮೂರನೆಯವರು.

ಹುಚ್ಚುಮನಸ್ಸಿನ ಹತ್ತು ಮುಖಗಳು (ಆತ್ಮಕಥನ), ತೆರೆಯ ಮರೆಯಲ್ಲಿ, ಹಸಿವು ಮತ್ತು ಹಾವು ಸಣ್ಣಕಥೆಗಳು, ಅದ್ಭುತ ಜಗತ್ತು, ಸಿರಿಗನ್ನಡ ಶಬ್ದಕೋಶ, ಕಿರಿಯರ ವಿಶ್ವಕೋಶ, ವಿಜ್ಞಾನ ಪ್ರಪಂಚ, ಯಕ್ಷಗಾನ ಬಯಲಾಟ ಹೀಗೆ ಹಲವಾರು ಕಥೆ, ಕಾದಂಬರಿಗಳನ್ನು ಅವರು ಬರೆದಿದ್ದಾರೆ.1997, ಡಿಸೆಂಬರ್ 9ರಂದು ನಿಧನ ಹೊಂದಿದರು.

# ಹಬ್ಬ-ರಾಷ್ಟ್ರೀಯ ದಿನಾಚರಣೆ

### ಗಾಂಧಿ ಜಯಂತಿ (ಅಕ್ಟೋಬರ್ 2)



ಸತ್ಯ ಮತ್ತು ಅಹಿಂಸೆಯ ಮೂಲಕವೂ ಹೋರಾಟ ಸಾಧ್ಯ ಎಂಬುದನ್ನುಜಗತ್ತಿಗೆ ಮೊಟ್ಟಮೊದಲು ತೋರಿಸಿಕೊಟ್ಟ ಧೀಮಂತ ನಾಯಕ ಮೋಹನದಾಸ ಕರಮಚಂದ ಗಾಂಧಿ.


'ರಾಷ್ಟ್ರಪಿತ' ಎಂದೇ ಪರಿಚಿತರಾಗಿರುವ ಗಾಂಧೀಜಿಯ ಜನ್ಮದಿನವಾದ ಅಕ್ಟೋಬರ್ 2 ಅನ್ನು ಗಾಂಧಿ ಜಯಂತಿ ಎಂದು ಆಚರಿಸಲಾಗುತ್ತಿದೆ.

ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ವಕೀಲರಾಗಿದ್ದಾಗ ಅಲ್ಲಿ ಶೋಷಣೆಗೆ ಒಳಗಾದ ಸಮುದಾಯವು ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದ ಅವಧಿಯಲ್ಲಿ ಅಹಿಂಸಾತ್ಮಕ ನಾಗರಿಕ ಅವಿಧೇಯತೆಯ ಆಂದೋಲನವನ್ನು ಮೊದಲ ಬಾರಿಗೆ ಪ್ರಯೋಗಿಸಿದರು. 1921ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕತ್ವ ವಹಿಸಿದ ಬಳಿಕ, ಬಡತನದ ನಿವಾರಣೆ, ಮಹಿಳಾ ಹಕ್ಕುಗಳ ವಿಸ್ತರಣೆ, ಧಾರ್ಮಿಕ ಮತ್ತು ಜನಾಂಗೀಯ ಸೌಹಾರ್ದ, ಅಸ್ಪೃಶ್ಯತೆಯ ಅಂತ್ಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲು ಹಮ್ಮಿಕೊಳ್ಳಲಾದ ರಾಷ್ಟ್ರವ್ಯಾಪಿ ಚಳವಳಿಗಳ ನೇತೃತ್ವವನ್ನು ಗಾಂಧೀಜಿ ವಹಿಸಿಕೊಂಡರು..

### ನವರಾತ್ರಿ, ವಿಜಯದಶಮಿ (ಅಕ್ಟೋಬರ್ 3- 4)

ಆಶ್ವಯುಜ ಶುದ್ಧ ಪ್ರತಿಪದೆಯಿಂದ ದಶಮಿಯವರೆಗೆ ಭಾರತದಾದ್ಯಂತ ಸಾಂಪ್ರದಾಯಿಕವಾಗಿ ಆಚರಿಸಲಾಗುವ ನವರಾತ್ರಿ ಮತ್ತು ವಿಜಯದಶಮಿ ಹಬ್ಬ ಹಿಂದೂಗಳಲ್ಲಿ ಕ್ರಿಯಾತ್ಮಕವಾಗಿ ಮಾತ್ರವಲ್ಲ ಭಾವನಾತ್ಮಕವಾಗಿ ಭಾರೀ ಮಹತ್ವ ಪಡೆದಿದೆ. ಈ ಹತ್ತು ದಿನಗಳ ಸಂಭ್ರಮದ ದಸರಾಹಬ್ಬದ ದಿನಗಳಂದು ಬನಶಂಕರಿ, ಚಾಮುಂಡೇಶ್ವರಿ, ದುರ್ಗೆ, ಸರಸ್ವತಿ ಮುಂತಾದ ತಮ್ಮ ಇಷ್ಟದೇವತೆಗಳನ್ನು ಭಕ್ತಿಭಾವದಿಂದ ಪೂಜಿಸಲಾಗುತ್ತದೆ. ಒಂಬತ್ತು ದಿನಗಳಂದು ಒಂಬತ್ತು ವಿವಿಧ ದೇವ ದೇವತೆಗಳ್ನು ಸ್ತುತಿಸಲಾಗುತ್ತದೆ.

ನವರಾತ್ರಿಯ ಕೊನೆಯ ದಿನದ ಆಚರಣೆ ಮಹಾನವಮಿಯಂದು ಆಯುಧ ಪೂಜೆಗೆ ಹೆಚ್ಚಿನ ಮಹತ್ವ, ತರಕಾರಿ ಹೆಚ್ಚುವ ಚಾಕುವಿನಿಂದ ಹಿಡಿದು ದೇಶದ ರಕ್ಷಣೆಗಾಗಿ ಬಳಸಲಾಗುವ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಕೂಡ ಆಯುಧ ಪೂಜೆಯಂದು ಪೂಜಿಸಲಾಗುತ್ತದೆ.



ದೇವಾನುದೇವತೆಗಳಿಗೆ ಕಾಟ ಕೊಡುತ್ತಿದ್ದ ಮಹಿಷಾಸುರನನ್ನು ಚಾಮುಂಡೇಶ್ವರಿ, ದುರ್ಗೆ, ಬನಶಂಕರಿ ಎಂದು ಮೊದಲಾದ ನಾಮಾವಳಿಗಳಿಂದ ಸ್ತುತಿಸಲಾಗುವ ದೇವಿ ನವರಾತ್ರಿಯ ಒಂಬತ್ತನೇ ದಿನದಂದು ಸಂಹರಿಸಿ ಲೋಕಕ್ಕೆ ಶಾಂತಿಯನ್ನು ತಂದಳೆಂಬ ನಂಬಿಕೆಯ ದ್ಯೋತಕವಾಗಿ ಅಂದು ಆಯುಧ ಪೂಜೆ ಮಾಡಲಾಗುತ್ತದೆ.

### ಬಕ್ರೀದ್ (ಅಕ್ಟೋಬರ್ 5)

ಬಕ್ರೀದ್ ತ್ಯಾಗ ಬಲಿದಾನದ ಸಂಕೇತ. ಭಾರತವೂ ಸೇರಿ ವಿಶ್ವದಾದ್ಯಂತ ಮುಸ್ಲಿಮರು ಈ ಹಬ್ಬವನ್ನು ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ.



ಈ ಹಬ್ಬಕ್ಕೊಂದು ಹಿನ್ನೆಲೆ ಇದೆ. ಧರ್ಮ ಪ್ರವಾದಿಗಳಾದ ಹಜರತ್ ಇಬ್ರಾಹಿಂ ಖಲೀಲುಲ್ಲಾಹ್ರವರ ಸತ್ವಪರೀಕ್ಷೆ ಮಾಡಲು ಅಲ್ಲಾಹ್‌ನು ಒಮ್ಮೆ ಅವರಿಗೆ 'ನಿನ್ನ ಅತಿ ಪ್ರೀತ್ಯಾದರಗಳಿಗೆ ಪಾತ್ರವಾದ ಜೀವ ಒಂದನ್ನು ಬಲಿ ಕೊಡಬಲ್ಲೆಯೋ?' ಎಂದು ಕೇಳಿದನು. ಪಿತೃವಾತ್ಸಲ್ಯದ ಪ್ರತೀಕವೆನಿಸಿದ ತಮ್ಮ ಏಕೈಕ ಪುತ್ರನಾದ ಇಸ್ಮಾಯಿಲ್‌ನ ಬಲಿದಾನ ಮಾಡಬೇಕೆಂಬುದು ಭಗವಂತನ ಇಚ್ಛೆ ಎಂದು ಅವರಿಗೆ ಮನವರಿಕೆಯಾಯಿತು. ಮಗನನ್ನು ಬಲಿ ಕೊಡಲು ಸಿದ್ಧರಾದರು.

ಆದರೆ ಅನೇಕ ಸಲ ಪ್ರಯತ್ನ ಪಟ್ಟರೂ ಮಗನ ಕತ್ತಿನ ಮೇಲಿಟ್ಟ ಕತ್ತಿ ಹರಿಯಲಿಲ್ಲ. ಇದನ್ನು ಕಂಡ ಮಗ ಇಸ್ಮಾಯಿಲ್, ತನ್ನ ತಂದೆಗೆ ಹೀಗೆ ಹೇಳಿದರು: 'ಅಪ್ಪಾ, ನಿನ್ನನ್ನು ಪುತ್ರವಾತ್ಸಲ್ಯ ಕಾಡಿಸುತ್ತಿದೆ. ಆದ್ದರಿಂದ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಕತ್ತಿ ಹರಿಸು'. ಇದನ್ನು ಕೇಳಿದ ತಂದೆ ಇಬ್ರಾಹಿಮ್ ಖಲೀಲುಲ್ಲಾಹ್ರವರು ತಮ್ಮ ಕಣ್ಣುಗಳಿಗೆ ಪಟ್ಟಿಯನ್ನು ಕಟ್ಟಿ 'ಬಿಸ್ಮಿಲ್ಲಾ' ಎಂದು ಹೇಳಿ ಒಮ್ಮೆಲೇ ಮಗನ ಮೇಲೆ ಕತ್ತಿಯನ್ನು ಜೋರಾಗಿ ಹರಿಸಿದರು. ಕತ್ತಿ ಎಷ್ಟೇ ಹರಿಸಿದರು ದೈವಿ ಕಾರಣದಿಂದ ಕತ್ತಿ ಇಸ್ಮಾಯಿಲ್‌ರ ಕತ್ತನ್ನು ಕೊಯ್ಯುವುದಿಲ್ಲ.

ಆ ವೇಳೆ, ಪ್ರತ್ಯಕ್ಷರಾದ ದೇವದೂತ ಜಿಬ್ರಾಯಿಲ್, ಇಸ್ಮಾಯಿಲ್ರನ್ನು ಒತ್ತಟ್ಟಿ ಅವರ ಬದಲು ಒಂದು ಕುರಿಯನ್ನು ಬಲಿಕೊಡುವಂತೆ ಆಜ್ಞಾಪಿಸುತ್ತಾರೆ. ಈ ಕಾರಣ ಬಲಿ ಕೊಟ್ಟ ಜೀವ ಒಂದು ಕುರಿ ಆಗುತ್ತದೆ. ಜತೆಗೆ ಪ್ರವಾದಿ ಇಬ್ರಾಹಿಮರು ಸೃಷ್ಟಿಕರ್ತನಾದ ಅಲ್ಲಾನಲ್ಲಿಟ್ಟಿರುವ ಸತ್ಯನಿಷ್ಠೆಯ ಸತ್ವಪರೀಕ್ಷೆಯೂ ನಡೆದಿರುತ್ತದೆ.ಹೀಗೆ ದೇವನಲ್ಲಿ ತಮಗಿರುವ ಸತ್ಯನಿಷ್ಠೆಯ ಸಂಕೇತವಾಗಿ ವಿಶ್ವದಾದ್ಯಂತ ಮುಸ್ಲಿಮರಿಂದ ಬಕ್ರೀದ್ ಹಬ್ಬ ಆಚರಿಸಲ್ಪಡುತ್ತಾ ಬಂದಿದೆ.ಅಲ್ಲದೇ, ಹಬ್ಬದ ದಿನದಂದು ಮುಸ್ಲಿಮರು ಕುರಿಯನ್ನು ತ್ಯಾಗ–ಬಲಿದಾನದ ಪ್ರತೀಕವಾಗಿ ಬಲಿ ಕೊಡುತ್ತಾರೆ.

### ದೀಪಾವಳಿ (ಅಕ್ಟೋಬರ್ 24)




ದುಷ್ಟ ಶಕ್ತಿಯ ಮೇಲೆ ಶುಭದ ಜಯವನ್ನು ಸಾರುವ ಬೆಳಕಿನ ಹಬ್ಬವೇ ದೀಪಾವಳಿ. ಉತ್ತರ ಭಾರತದವರಿಗೆ ಇದು ಹೊಸ ವರ್ಷದ ಆರಂಭ. ಕಾರ್ತಿಕ ಮಾಸದ ಅಮಾವಾಸ್ಯೆಯ ಎರಡು ದಿನ ಮುಂಚೆ ಪ್ರಾರಂಭವಾಗಿ ಅದರ ಎರಡು ದಿನಗಳ ನಂತರ ಮುಗಿಯುವ ಪರ್ವವಿದು.

ಶ್ರೀರಾಮ ರಾವಣನನ್ನು ಗೆದ್ದು ಸೀತೆ ಮತ್ತು ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದ ಸಂಭ್ರಮದ ದ್ಯೋತಕವಾಗಿಯೂ, ಶ್ರೀ ಕೃಷ್ಣನು ನರಕಾಸುರನನ್ನು ಸಂಹರಿಸಿದ ದಿನದ ಅಂಗವಾಗಿಯೂ ಈ ಹಬ್ಬ ಮಹತ್ವ ಪಡೆದಿದೆ.

ದೀಪಾವಳಿ ಸಂದರ್ಭದಲ್ಲಿ ಆಯುಧಪೂಜೆ ಮತ್ತು ಗೋಪೂಜೆಗೆ ವಿಶೇಷ ಮಹತ್ವ. ಮನೆಯ ದ್ವಾರವನ್ನು ದೀಪದಿಂದ ಬೆಳಗುವುದರ ಜೊತೆಗೆ ಈ ಸಮಯದಲ್ಲಿ ಮಹಾವೀರರ ಉಪದೇಶಗಳನ್ನೊಳಗೊಂಡ ಉತ್ತರಾಧ್ಯಯನ ಸ್ತೋತ್ರದ ಪಠಣೆ ಮಾಡುತ್ತಾರೆ. ಕೆಲವರು ಮಹಾವೀರರ ನಿರ್ವಾಣ ಸ್ಥಳವಾದ ಬಿಹಾರ ರಾಜ್ಯದ ಪಾವಾಪುರಿಗೆ ಯಾತ್ರೆ ಕೈಗೊಳ್ಳುತ್ತಾರೆ. ವ್ಯಾಪಾರಿಗಳು ಹೊಸ ಲೆಕ್ಕದ ಪುಸ್ತಕಗಳನ್ನು ಪ್ರಾರಂಭಿಸುತ್ತಾರೆ.

### ರಾಜ್ಯೋತ್ಸವ (ನವೆಂಬರ್ 1)




ಭಾಷಾವಾರು ಪ್ರಾಂತ್ಯ ರಚನೆಯ ಅಂಗವಾಗಿ ಮೈಸೂರು ರಾಜ್ಯವು (ಈಗಿನ ಕರ್ನಾಟಕ) 1956ರ ನವೆಂಬರ್ 1 ರಂದು ನಿರ್ಮಾಣವಾದುದರ ಸಂಕೇತವಾಗಿ ಆಚರಿಸುವ ದಿನವೇ ರಾಜ್ಯೋತ್ಸವ.

ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾವ್, ಕರ್ನಾಟಕ ಏಕೀಕರಣ ಚಳವಳಿಯನ್ನು 1905ರಲ್ಲಿ ಪ್ರಾರಂಭಿಸಿದರು. 1950ರಲ್ಲಿ ಭಾರತ ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತ್ಯಗಳು, ಭಾಷೆ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ ಮೈಸೂರು ರಾಜ್ಯ ಉದಯವಾಯಿತು.

### ಕ್ರಿಸ್ಮಸ್ (ಡಿಸೆಂಬರ್ 25)



ಕ್ರೈಸ್ತರ ಆರಾಧ್ಯದೈವ ಯೇಸುಕ್ರಿಸ್ತನ ಜನುಮ ದಿನವೇ ಕ್ರಿಸ್ಮಸ್. ಪ್ರತಿವರ್ಷ ಡಿಸೆಂಬರ 25ರಂದು ಆಚರಿಸಲಾಗುತ್ತದೆ. ಬ್ರಿಟಿಷ್ ಆಳ್ವಿಕೆಯ ಪೂರ್ವದಿಂದಲೂ ಭಾಷಾ ಪ್ರಾಂತ್ಯಗಳ ವೈವಿಧ್ಯ, ವಿಭಿನ್ನತೆಗಳಲ್ಲೂ ಸಾಂಪ್ರದಾಯಿಕವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ.

ಮುಖ್ಯವಾಗಿ ಈ ಹಬ್ಬದಲ್ಲಿ ಕ್ರೈಸ್ತರು ಮನೆಗಳಿಗೆ ಬಣ್ಣ,ವಿದ್ಯುದ್ದೀಪಗಳಿಂದ ಅಲಂಕರಿಸುವುದಲ್ಲದೇ ಕ್ರಿಸ್ಮಸ್ ಟ್ರೀ, ಬಲೂನ್, ಸಾಂಟಾ ಕ್ಲಾಸ್ ಗ್ರೀಟಿಂಗ್ ಕಾರ್ಡಿನಿಂದ ಮೆರುಗು ನೀಡುತ್ತಾರೆ. ಅಲ್ಲದೇ ಯೇಸುವಿನ ಜನನ ಸಾರುವ ನಕ್ಷತ್ರದ ಆಕೃತಿ ವಿಶೇಷಗಳು ಸಾಮಾನ್ಯವಾಗಿ ಎಲ್ಲರ ಮನೆಯ ಮುಂದೆ ಕಂಗೊಳಿಸುತ್ತವೆ. ಈ ಸಂದರ್ಭದಲ್ಲಿ ಪ್ರತಿ ಚರ್ಚುಗಳನ್ನು ಸಹ ಆಯಾ ಪ್ರಾಂತ್ಯದ ಸಾಂಪ್ರದಾಯಿಕ ರೀತಿಗನುಗುಣ ಶೃಂಗರಿಸಲಾಗುತ್ತದೆ. ಕ್ರಿಸ್ಮಸ್ ದಿನ ಚರ್ಚುಗಳಲ್ಲಿ ಮಧ್ಯರಾತ್ರಿ ಆರಾಧನೆ ಸಾಮಾನ್ಯ. ಆರಾಧನೆಯಲ್ಲಿ ಪ್ರಮುಖವಾಗಿ ಯೇಸುಕ್ರಿಸ್ತನ ಜನನದ ಕುರಿತಾದ ಸಂಗೀತ ಮತ್ತು ಪಾದ್ರಿಯ ವಿಶೇಷ ಕ್ರಿಸ್ಮಸ್ ಸಂದೇಶ ಜನರ ಭಾವನೆಗಳ ಮೇಲೆ ಮತ್ತು ಅವರ ಜೀವನದ ಮೇಲೆ ಪರಿಣಾಮ ಬೀರುವಂಥದ್ದು,



### ಹುಟ್ಟುಹಬ್ಬದ ಶುಭಾಶಯಗಳು

2014ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿ ಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗಾಗಿ ಶ್ರಮಿಸಿ 2014ರ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಭಾವಪೂರ್ಣ ಅಭಿನಂದನೆ ಹಾಗೂ ಶುಭಾಶಯಗಳು. .

**-ಸಂಪಾದಕೀಯ ಮಂಡಳಿ.**

# ಡಿಸ್ಟ್ರಿಬ್ಯೂಶನ್ ಲೈನ್ ಸಿಮೂಲೇಷನ್ ತಂತ್ರಾಂಶವನ್ನು ವ್ಯವಸ್ಥಾಪಕ ನಿರ್ದೇಶಕರು ಬಿಡುಗಡೆಗೊಳಿಸಿದ ಸಂದರ್ಭ







# ಬೆಸ್ಕಾಂ ನಿಗಮ ಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣೇಶೋತ್ಸವ













# ಅನಧಿಕೃತ ವಿದ್ಯುತ್ ಸಂಪರ್ಕ ಅಪಾಯಕಾರಿ





## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎಚ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ವಿ.ಎಸ್. ಬಿದರಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ಕೆ. ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:


**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ಬೆಸ್ಕಾಂ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 9243150000 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806